SERVICE ABOVE SELF




Rotary

विश्वमित्र:

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD

Rotary

Rtn. Francesco Arezzo
RI President 2025-26

Rtn. K. Palaksha
District Governor 2025-26

Rtn. Anand R.
President, Mob: 99800 93066

Rtn. Vishwas Y.
Secretary, Mob : 99800 63180

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –35 ದಿನಾಂಕ : 11–03–2026





**ಮಹಿಳಾ ದಿನಾಚರಣೆ ಅಂಗವಾಗಿ ರೋಟರಿ ಕ್ಲಬ್ ಶಿವಮೊಗ್ಗದಲ್ಲಿ ಒಂದು ವಿಶಿಷ್ಠ ಕಾರ್ಯಕ್ರಮ. ಈ ಕಾರ್ಯಕ್ರಮಕ್ಕೆ ಶಿವಮೊಗ್ಗ ರೋಟರಿಯ ಮಹಿಳಾ ಸದಸ್ಯರುಗಳು ಮತ್ತು ಅನ್ಸ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಟ್ಟರು. ರೊ. ಪಿಎಜಿ ಸುನೀತಾ ಶ್ರೀಧರ್‌ರವರು ಮಹಿಳಾ ಸದಸ್ಯರುಗಳು ಈ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಶ್ರಮಿಸಿದ್ದು ಈ ಸಭೆಗೆ ಮುಖ್ಯ ಅತಿಥಿಗಳಾಗಿ ಡಾ. ಶುಭಾ ಮರವಂತೆರವರು ಭಾಗವಹಿಸಿದ್ದರು. ಅವರೊಂದಿಗೆ ಅಧ್ಯಕ್ಷರಾದ ರೊ. ಆರ್. ಆನಂದ್ ಮತ್ತು ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದು, ಮುಖ್ಯ ಅತಿಥಿಗಳು 'ಬದಲಾವಣೆಯ ದಾರಿಯಲ್ಲಿ ಮಹಿಳೆ' ಎಂಬ ವಿಚಾರದಲ್ಲಿ ಮಾತನಾಡಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಅಧ್ಯಕ್ಷರಿಗೆ ಕಾಲರ್ ತೊಡಿಸಿದ ನಂತರ ಸಭೆ ಆರಂಭವಾಯಿತು.**

ಆರಂಭದಲ್ಲಿ ರೊ.ಡಾ.ಶೋಭಾ ಗಿರೀಶ್‌ರವರು, "ವಿಘ್ನೇಶ್ವರ ನಿನಗೆ ಪ್ರಥಮ ಪ್ರಣಾಮ" ಎಂಬ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ ಪ್ರಾರ್ಥನೆ ಮಾಡಿದರು. ರೊ. ಮಲ್ಲಿಕಾ ಜೋಯ್ಸ್‌ರವರು ಸರ್ವರನ್ನು ಸ್ವಾಗತಿಸಿದರು. ಹುಟ್ಟು ಹಬ್ಬದ ಶುಭಾಶಯಗಳ ಪ್ರಕಟಣೆಯನ್ನು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ನೆರವೇರಿಸಿದರು. ಇದೇ ಸಂದರ್ಭದಲ್ಲಿ ರೊ.ರೇಣುಕಾ ಶ್ರೀನಾಥರವರು "ಎಲ್ಲೇ ನಿನ್ನ ತಾಯೇ ಎಲ್ಲಾ ನಿನ್ನ ಮಾಯೇ" ಎಂಬ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ ಆಗಮಿಸಿದ್ದ ಸರ್ವರನ್ನು ಭಾವುಕರನ್ನಾಗಿ ಮಾಡಿದರು.







## ಈ ವಾರದ ಸಭೆ

**ದಿನಾಂಕ: 18–03–2026, ಬುಧವಾರ** **ಸಂಜೆ 6:45 ರಿಂದ**

ಮುಖ್ಯ ಅತಿಥಿ :

**ಶ್ರೀ ಹಂದಲಸು ರಾಘವೇಂದ್ರ ಭಟ್,** ಜ್ಯೋತಿಷ್ಯರು

ಯುಗಾದಿ ಹಬ್ಬದ ವಿಶೇಷ ವಿಷಯ :

**ಬೇವು ಬೆಲ್ಲದ ಸಮ್ಮಿಲನ – ಬದುಕಿಗೆ ಪಾಠ**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ




ಇದೇ ಸಂದರ್ಭದಲ್ಲಿ ಆ ಸಭೆಯಲ್ಲಿ ಹಾಜರಿದ್ದ ನಮ್ಮ ಈ ಕೆಳಕಂಡ ಮಹಿಳಾ ಸದಸ್ಯರುಗಳನ್ನು ವೇದಿಕೆಗೆ ಆಹ್ವಾನಿಸಿ ನೆನಪಿನ ಕಾಣಿಕೆ ನೀಡಲಾಯಿತು. ರೊ. ಅನುರಾಧ ಶೀರನಾಳಿ, ರೊ.ರೇಣುಕಾ ಶ್ರೀನಾಥ್, ರೊ.ಗಾಯತ್ರಿ ಪ್ರವೀಣ್‌ಕಾಂತ್, ರೊ.ಗೀತಾಂಜಲಿ ಪಿ, ರೊ. ಹೇಮಾವತಿ, ರೊ.ಡಾ. ಕಾಂಚನ್‌ಕುಲಕರ್ಣಿ, ರೊ.ಮಲ್ಲಿಕಾ ವಿ.ಜೋಯ್ಸ್, ರೊ ನೀತು ದೀಪಕ್, ರೊ. ಶಾರದಾಗೋಪಾಲ್, ರೊ. ಡಾ. ಶೋಭಾಗಿರೀಶ್, ರೊ.ಪಿಎಜಿ. ಸುನೀತಾ ಶ್ರೀಧರ್, ರೊ.ಡಾ. ಉಷಾ ಪ್ರಭು, ರೊ.ಅಶ್ವಿನಿ ಎಂ.ಎಂ., ರೊ. ನಿರ್ಮಲಾ ಶಿವಾನಂದ್, ರೊ.ಶೋಭಾ ರುದ್ರೇಶ್, ಶ್ರೀಮತಿ ನಾಗರತ್ನ ಶ್ರೀನಿವಾಸ್, ಶ್ರೀಮತಿ ಶೀಲಾ ಶೈಲಿನ್, ಶ್ರೀಮತಿ ಗೌರಿ ವಿಜಯಕುಮಾರ್.

ರೊ. ಡಾ. ಕಾಂಚನ್ ಕುಲಕರ್ಣಿಯವರು ಅಂದಿನ ಸಭೆಯ ಮುಖ್ಯ ಅತಿಥಿಗಳಾದ ಡಾ. ಶುಭಾ ಮರವಂತೆಯವರ ಪರಿಚಯ ಮಾಡಿದರು. ಕುವೆಂಪು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿಯಾಗಿರುವ ಇವರು, ಕನ್ನಡ ಪ್ರಾಧ್ಯಾಪಕಿ, ಲೇಖಕಿ, ಭಾಷಣಗಾರರೂ ಆಗಿದ್ದಾರೆ. ಮೂಲತಃ ಕುಂದಾಪುರದ ಮರವಂತೆಯವರಾದ ಇವರು ಯಕ್ಷಗಾನ ಕಲಾ ಕುಟುಂಬದಿಂದ ಬಂದವರು. ತಂದೆ ದಿ.ಶ್ರೀನಿವಾಸದಾಸರು ಪ್ರಸಿದ್ಧ ಯಕ್ಷಗಾನ ಕಲಾವಿದರು. ತಾಯಿ ಶ್ರೀಮತಿ ಮಹಾಲಕ್ಷ್ಮಿದಾಸ್‌ರವರು. ಬಾಲ್ಯದಿಂದಲೇ ಸಾಹಿತ್ಯ ಸಂಸ್ಕೃತಿ ಬಗ್ಗೆ ಆಸಕ್ತಿ ಬೆಳೆಸಿಕೊಂಡ ಇವರು ಹತ್ತನೆ ತರಗತಿಯಲ್ಲಿರುವಾಗಲೇ ತೊದಲು ಎನ್ನುವ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಪದವಿ ಶಿಕ್ಷಣ ಪಡೆಯುವಾಗಲೇ ವಿದ್ಯಾರ್ಥಿ ಸಾಹಿತ್ಯ ಸಮ್ಮೇಳನದ ಮೊದಲ ಅಧ್ಯಕ್ಷರಾಗಿದ್ದಾರೆ. ತೊದಲು, ಆತ್ಮರಾಜ ಮತ್ತು ಇತರೆ ಕಥೆಗಳೊಂದಿಗೆ ಕನಕ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆ, ಪದ ಸಂತತಿ, ಅರಿವೆಂಬ ಕದಿರು ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಎರಡೂವರೆ ಸಾವಿರಕ್ಕೂ ಅಧಿಕ ಸಾಹಿತ್ಯ, ಸಂಸ್ಕೃತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿದ್ದಾರೆ. ಇವರ ಮಾತಿನ ಮೋಡಿಗೆ ಸೋಲದವರೇ ಇಲ್ಲ. ಯಾವುದೇ ವಿಷಯದ ಬಗ್ಗೆ ಸರಳವಾಗಿ ಮಾತನಾಡುವ ಚಾತುರ್ಯ ಇವರಿಗೆ ಸಿದ್ಧಿಸಿದೆ. ಮಾತಿನ ಲಯ, ಪ್ರಬುದ್ಧ ಭಾಷೆಯ ಬಳಕೆ ಕೇಳುಗರನ್ನು ಆಕರ್ಷಿಸುತ್ತದೆ. ಇವರು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

ಮುಖ್ಯ ಅತಿಥಿಗಳಾದ ಡಾ, ಶುಭಾ ಮರವಂತೆಯವರು ಮಾತನಾಡುವ ಮೊದಲಿಗೆ ಎಲ್ಲಾ ಮಹಿಳೆಯರಿಗೆ ವಿಶ್ವ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು. ಮಹಿಳೆಯರು ಅನುಭವ, ವಿವೇಕ, ಅರಿವು ಎಲ್ಲವನ್ನೂ ಪಡೆದಿದ್ದೀವೆ ಆದರೂ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ಏಕೆ? ಗಂಡಸರು ನಮ್ಮನ್ನು ಅಲುಗಾಡಿಸುತ್ತಾರಾದ್ದರಿಂದ. ಈಗ ಹೇಗಾಗಿದೆ ಎಂದರೆ, ಗಂಡ ಹೌದಪ್ಪ, ಹೆಂಡತಿದಪ್ಪ ಎನ್ನುವಂತಾಗಿದೆ ಎಂದು ಹಾಸ್ಯ ಚಟಾಕಿಯೊಂದಿಗೆ ಮಾತು ಮುಂದುವರಿಸಿದರು. ಮಹಿಳೆಯರನ್ನು ಗೌರವಿಸಿದೆ ಎನ್ನುವ ಕಾರಣಕ್ಕಾಗಿಯೇ ಸಮಾಜ, ಸುಭೀಕ್ಷ ಸಂಸ್ಕೃತಿಯನ್ನು ಕಾಪಾಡಿದೆ. ಹೆಣ್ಣು ಮಕ್ಕಳಿಗೆ ವಾತ್ಸಲ್ಯ ಗೌರವ ದೊರಕಿರುವುದರಿಂದಲೇ ನಾವುಗಳು ಸುಖವಾಗಿದ್ದೇವೆ. ಇಲ್ಲವೆಂದರೆ ದೇಶದಲ್ಲಿ ಅಲ್ಲೋಲ ಕಲ್ಲೋಲವಾಗುತ್ತಿತ್ತು. ತಾಳಿಕಟ್ಟಿಸಿಕೊಂಡು, ಸಹಿಸಿಕೊಂಡಿದ್ದೇವೆ, ಸುಖವಾಗಿದ್ದೇವೆ ಎಂದರು.

ನಸುಕಿನಲ್ಲಿ ನಾವು ಕರಾಗ್ರೆ ವಸತೇ ಲಕ್ಷ್ಮೀ ಎಂದು ಸ್ತ್ರೀ ದೇವತೆಗಳನ್ನೇ ನೆನೆಯುತ್ತೇವೆ. ವಿಶ್ವದಾದ್ಯಂತ ಮಹಿಳಾ ದಿನಾಚರಣೆ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಅದರ ಉಗಮದ ಬಗ್ಗೆ ಮಾತನಾಡಿದ ಮಾತನಾಡಿದ ಮುಖ್ಯ ಅತಿಥಿಗಳು, 1975 ಮಾರ್ಚ್ 8 ರಂದು ಸರೋಜಿನಿ ನಾಯ್ಡುರವರ ಜನ್ಮ ದಿನವನ್ನು ಮಹಿಳಾ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ವೃದ್ಧರಾಗಿ ಪಕ್ವತೆಯನ್ನು ಕಂಡುಕೊಂಡ ಮೇಲೆ ಬದುಕುವ ವೃದ್ಧ ದಂಪತಿಗಳ ದೈನಂದಿನ ಘಟನೆಯೊಂದನ್ನು ಹೇಳಿ ಸರ್ವರನ್ನು ನಗೆಗಡಲಲ್ಲಿ ತೇಲಿಸಿದರು. ವೃದ್ಧರೊಬ್ಬರು ತನ್ನ ಹೆಂಡತಿಯನ್ನು ಹನಿ, ಡಾರ್ಲಿಂಗ್, ಸ್ವೀಟ್, ಸ್ವೀಟ್ ಹಾರ್ಟ್ ಎಂದು ಕರೆದಾಗ ಎಷ್ಟು ಪ್ರೀತಿ ಇವರಿಗೆ ಎಂದುಕೊಂಡರೆ, ಅದಲ್ಲವಂತೆ, ಅವರಿಗೆ ಅವರ ಹೆಂಡತಿ ಹೆಸರು ಮರೆತು ಹೋಗಿದೆಯಂತೆ ಎನ್ನುವ ಪ್ರಸಂಗವನ್ನು ಉಲ್ಲೇಖಿಸಿದರು.

ಸಂಸಾರದಲ್ಲಿ ಶೂನ್ಯ ಒಂದನ್ನು ತೆಗೆದರೆ ಸಾಕು ನಾವು ಸಸಾರವಾಗುತ್ತೇವೆ. ಒಬ್ಬರು ಇಲಿ ಅಥವಾ ಒಬ್ಬರು ಪುಲಿಯಾಗಬೇಕು. ಆಗ ಸಂಸಾರ ಚೆನ್ನಾಗಿರುತ್ತದೆ. ಆಗ ಗಂಡನಾದವನು ಹಸು ಬೆಂಡು (ಹಸ್‌ಬೆಂಡ್) ಆಗಿ ಹೆದರಿದ ನಾಟಕವಾಡುತ್ತಾರೆ ಎಂದರು. ಸ್ತ್ರೀಯ ಸುಂದರರೂಪದ ಬಗ್ಗೆ ವರ್ಣಿಸುತ್ತಾ, ಸ್ತ್ರೀಯ ರೂಪಕ್ಕೆ ಒಂದು ಉದಾಹರಣೆ ನೀಡಿದ ಮುಖ್ಯ ಅತಿಥಿಗಳಾದ ಡಾ.ಶುಭಾ ಮರವಂತೆಯವರು, ಸ್ತ್ರೀ ರೂಪವೇ ಕೊನೆಯ ರೂಪವೆಂದರು. ಪ್ರತೀ ಹೆಣ್ಣಿನದು ವಿಶಿಷ್ಟ ಗುಣ. ಪ್ರತಿಯೊಂದು ಹೆಣ್ಣಿನಲ್ಲಿ ಗಂಡು ಇರುತ್ತಾನೆ. ಇದಕ್ಕೆ ಉದಾಹರಣೆ ಅರ್ಧನಾರೀಶ್ವರತತ್ವ. ಸ್ತ್ರೀತ್ವದ, ಆರ್ದ್ರತೆ, ರಕ್ಷಣಾತ್ಮಕ ಗುಣದಿಂದ ಇಂದು ಸಮಾಜ ಉಳಿದಿದೆ. ಬಸವಣ್ಣನಂಥಹವರು ಮತ್ತು ಎಲ್ಲಾ ಮಹಾತ್ಮರಲ್ಲೂ ಹೆಣ್ಣಿನ ಗುಣವಿದೆ. ಇದು ಜೈವಿಕವಾಗಿ ಸತ್ಯ. ನಮ್ಮೆಲ್ಲರಲ್ಲೂ ಪುರುಷ ಅದೃಶ್ಯ, ಎಲ್ಲಾ ಹೆಣ್ಣೆ. ಭಗವಾನ್ ಕೃಷ್ಣನಲ್ಲೂ ಹೆಣ್ಣಿನ ಗುಣಗಳಿವೆ. ಅದನ್ನು ಕಂಡು ಎಲ್ಲರೂ ಸಂಭ್ರಮಿಸಿದ್ದೇವೆ. ಅದ್ದರಿಂದಲೇ ಮಹಿಳಾ ದಿನಾಚರಣೆ ಮಾಡುತ್ತೇವೆ. ಆದರೆ ಅಲ್ಲಿ ಕ್ರೌರ್ಯವಿಲ್ಲ ಎಂದರು.

ದ್ರೌಪದಿ ಮತ್ತು ರಾಧೆಯರು ಶ್ರೇಷ್ಠರಾದವರು ಎಂದಿದ್ದಾನೆ ಶ್ರೀ ಕೃಷ್ಣ. ದ್ರೌಪದಿಯ ಧೃಡತೆ, ಚಾತುರ್ಯ, ನಿಷ್ಠೆ ಛಲದಿಂದ ಶ್ರೇಷ್ಠಳಾಗಿದ್ದಾಳೆ. ರಾಧೆತನ್ನ ಭಕ್ತಿಯಿಂದ, ನಿಷ್ಠೆಯಿಂದ, ನಿಷ್ಕಲ್ಮಶ ಪ್ರೀತಿಯಿಂದ ಶ್ರೇಷ್ಠತೆಯನ್ನು ಮೆರೆದಿದ್ದಾಳೆ ಎಂದರು. ಕೆಲವೊಮ್ಮೆ ಶ್ರೀಕೃಷ್ಣನೂ ಹೆಣ್ಣಿನ ವೇಷವನ್ನು ಧರಿಸಿದ್ದಾನೆ. ಹೆಣ್ತನದ ಗುಣಗಳಿಗಾಗಿ ಧರ್ಮಪತ್ನಿ ಎಂಬುದಾಗಿ ಸ್ತ್ರೀ ಕರೆಸಿಕೊಳ್ಳುತ್ತಾಳೆ. ಆದರೆ ಧರ್ಮಪತಿ ಎಂಬುದಿಲ್ಲ ಎಂಬುದಾಗಿ ಹಾಸ್ಯದೊಂದಿಗೆ ನುಡಿದರು.

ಹೆಣ್ಣು ಕೀಳು ಅಲ್ಲ. ದುರ್ಬಲಳೂ ಅಲ್ಲ. ಆದರೆ ವಿಲಿಯಂ ಗೋಲ್ಡ್ ಹೇಳುವಂತೆ, Never Equal to Men. ಆಕೆಗೆ ಏನೇ ನೀಡಿದರೂ ಅದನ್ನು ಏನು ಬೇಕಾದರೂ ರೂಪದಲ್ಲಿ ತಯಾರು ಮಾಡುತ್ತಾಳೆ. ಹೆಣ್ಣು ಗಂಡಿನಲ್ಲಿ ಸಮಾನತೆ, ಅಭಿರುಚಿಯ ಆತಿಥ್ಯ, ಸಂಸ್ಕೃತಿಯ ಚಿಂತನೆಗಳಲ್ಲಿ ಗಂಡಿನ ಸಹಭಾಗಿತ್ವವಿರಬೇಕು. ಸಮಾನತೆ ದೈಹಿಕ ರಚನೆಗಳಲ್ಲಲ್ಲ. ಸಾಮರ್ಥ್ಯವೇ ಬೇರೆ. ಸಮಾನತೆಯೇ ಬೇರೆ

**ಸಭೆಯ ವರದಿ 4ನೇ ಪುಟಕ್ಕೆ**

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**

# *Rotary International launches new peace center in India*



*Rotary Peace Center at Symbiosis International University will train peace and development professionals from across Asia*

*Leaders of Rotary International and Symbiosis International University gathered in Pune, India, to inaugurate a new Rotary Peace Center at the university. Supported through The Rotary Foundation, the center will provide experienced peacebuilders from across Asia with one-year professional development certificate fellowships to study subjects such as conflict transformation, sustainable development, and social change.*

*"With India's rich diversity and complex social landscape, the peace center will offer unique opportunities for cultivating leaders who can navigate conflict with empathy and innovation," says Bharat S. Pandya, a trustee of The Rotary Foundation and member of the Rotary Club of Borivli, Maharashtra, India. "This center will nurture a new generation of leaders in Asia who are dedicated to strengthening dialogue, understanding, and sustainable peace."*

*The new center will host up to 40 Rotary Peace Fellows per year to earn a postgraduate diploma in peace and development studies. The program is designed for midcareer professionals with experience working in peace and development fields, including within governments, non-governmental and community organizations, educational institutions, media outlets, and international agencies.*

*Symbiosis International University's motto, VasudhaivaKutumbakam, or The World Is One Family, reflects a commitment to internationalism and cultural understanding that dates to its founding. Established in 1971 as a cultural exchange center for students from other countries (particularly Africa) who were experiencing discrimination, Symbiosis today has more than 55,000 students from at least 85 nations.*

*"The university has been focused on nurturing global citizens through quality education and cross-cultural sensitization as well as empowering thoughtful leaders — essentials for creating a harmonious world," says Anita Patankar, director of the Symbiosis Centre for International Education and executive director of the university's campus in Dubai, United Arab Emirates. "The Rotary Peace Center, with its unique academic program, joins the Symbiosis family in extending this vision."*

*Symbiosis already has a history of collaborating with nearby Rotary Districts 3131 and 3141, which will jointly welcome and support peace fellows during their time in India. The university hosts annual Rotary Youth Leadership Awards, and Rotary members organize professional development opportunities for teachers. The Rotary Foundation recently awarded a global grant for a project at the university hospital, which provides free medical services to the community. "Symbiosis has consistently sought to build meaningful alliances that enrich learning and foster inclusive, knowledge-driven, and sustainable progress," says Vice Chancellor Ramakrishnan Raman. "Our collaboration with Rotary further reinforces this commitment, enabling new opportunities for scholarship, peacebuilding, and human development."*

*The peace center will be housed at the university's hilltop Lavale campus. Highlighting issues relevant to Asian countries, the curriculum will include many opportunities for the fellows to gain real-world experience through field visits outside of Pune as well as locally. Symbiosis has close relationships with more than 35 nearby villages, whose residents use its legal aid clinic and vocational training programs. The fellows will work with faculty members, other students, and village residents to learn about the villages, propose strategies for their development, and meet with local leaders for feedback. This kind of practical learning is possible thanks to the ethic of social responsibility that Symbiosis and Rotary share, says Laura Descher, the Rotary Peace Centers program director.*

*"The university's commitment to the advancement and well-being of not only their own students, but all people in their community and beyond, strongly aligns with Rotary's mission to do good in the world," she says. "Peace can only be achieved when dignity, integrity, and inclusion are prioritized across society."*

*With the opening of the new peace center, Rotary's eighth, The Rotary Foundation will be able to award up to 170 fully funded peace fellowships each year. More than 1,800 fellows have completed Rotary Peace Center programs around the world since 2002, going on to leadership roles in government agencies, NGOs, educational institutions, and international organizations. The first applications to attend the Symbiosis peace center are being accepted through 15 May 2026, and it will welcome its first group of fellows in early 2027. By training leaders in the strategies and practices of peacebuilding, Rotary Peace Centers have a wide-ranging impact on the world that will be felt for years to come, says Rotary International President Francesco Arezzo.*

*"In this interconnected world, peace can no longer be viewed as an abstract ideal. It must be cultivated through institutions that combine knowledge, ethical leadership, and action," Arezzo says. "The Rotary Peace Center at Symbiosis International University reflects Rotary's commitment to nurturing leaders who understand and act with integrity toward a cause. The center will contribute not only to regional peacebuilding in Asia, but to a stronger global framework for shared responsibility."*

***- Dr. P. Narayana***



## ಸಂಪಾದಕೀಯ

### ಎರಡು ಬಾಣಗಳು

ಒಂದು ದಿನ ಶಿಷ್ಯನೊಬ್ಬ ಬುದ್ಧನ ಹತ್ತಿರ ಕೇಳಿದ, "ಗುರುಗಳೇ ಒಂದೇ ಥರದ ಸಮಸ್ಯೆ ಇದ್ದರೂ ಕೆಲವರು ಕಡಿಮೆ ಮತ್ತು ಕೆಲವರು ಜಾಸ್ತಿ ಸಂಕಷ್ಟ ಅನುಭವಿಸುತ್ತಾರೆ. ಇದು ಏಕೆ ಅನ್ನುವುದು ನನಗಿನ್ನೂ ಅರ್ಥವಾಗಿಲ್ಲ. ಇದಕ್ಕೆ ಕಾರಣವೇನು?" ಅದಕ್ಕೆ ಬುದ್ಧ ಎರಡು ಬಾಣಗಳ ಕಥೆ ಹೇಳಿದ.

ಮನುಷ್ಯನೊಬ್ಬ ಬಾಣವೊಂದರಿಂದ ಗಾಸಿಗೊಂಡಾಗ ನೋವನ್ನು ಅನುಭವಿಸುತ್ತಾನೆ. ಯಾರಿಗೇ ಆದರೂ ಬಾಣ ತಗುಲಿದಾಗ ನೋವಾಗುತ್ತದೆ. ಇದು ಸಹಜವಾದದ್ದು. ಅದರೆ ಬಾಣ ನೆಟ್ಟಾಗ ಆತ ಹೇಗೆ ವರ್ತಿಸುತ್ತಾನೆ ಎಂಬುದರ ಮೇಲೆ ಆತನ ಸಂಕಷ್ಟದ ಪ್ರಮಾಣ ನಿರ್ಧಾರವಾಗುತ್ತದೆ. ಮೊದಲನೇ ಬಾಣ ಬದುಕಿನ ಅನಿವಾರ್ಯ ಸಂಕಷ್ಟಗಳು. ಕಾಯಿಲೆ, ನಷ್ಟ, ಕಷ್ಟ, ಸೋಲು ಇವೆಲ್ಲ ಪ್ರತಿಯೊಬ್ಬರ ಬದುಕಿನಲ್ಲೂ ಸಾಮಾನ್ಯ. ಇವನ್ನು ಪ್ರಯತ್ನಿಸಿದರೂ ತಡೆಯಲಾಗದು. ಆದರೆ ಈ ಅನಿವಾರ್ಯವಾದ ಮೊದಲ ಬಾಣ ಚುಚ್ಚಿದಾಗ ನಾವು ಹೇಗೆ ವರ್ತಿಸುತ್ತೇವೆ ಎಂಬುದು ನಮಗೆ ಎರಡನೇ ಬಾಣ ಚುಚ್ಚುತ್ತದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸುತ್ತದೆ. ಸಾಮಾನ್ಯವಾಗಿ ಭಯ, ಸಿಟ್ಟು, ಅಳು ಇವುಗಳನ್ನು ನಮ್ಮ ಸಂಕಟಕ್ಕೆ ಜತೆಯಾಗಿಸಿಕೊಳ್ಳುತ್ತೇವೆ. ಅದೂ ಸಹಜವೇ ಆದರೆ ನಮಗೆ ಏನಾದರೂ ತೊಂದರೆ ಆದಾಗ ಅಯ್ಯೋ ನಮಗೇ ಏಕೆ ಹೀಗಾಯಿತು? ನನ್ನ ಹಣೆಬರಹ ಇಷ್ಟೇ, ನನ್ನ ಬದುಕೇ ವ್ಯರ್ಥ, ನನ್ನ ಜೀವನದಲ್ಲಿ ಎಲ್ಲ ಮುಗಿದು ಹೋಯಿತು' ಅಂತೆಲ್ಲ ಅಂದುಕೊಂಡೆವೋ ಆಗ ಎರಡನೇ ಬಾಣವನ್ನು ಚುಚ್ಚಿಕೊಳ್ಳುತ್ತೇವೆ' ಅಂದ ಬುದ್ಧ.

ಉದಾಹರಣೆಗೆ ಸಣ್ಣ ಅಪಘಾತವೊಂದರಲ್ಲಿ ಕೈಮುರಿದು ಹೋಗಿ ಎರಡು ತಿಂಗಳು ಪಟ್ಟಿ ಹಾಕಿಕೊಂಡಿರಬೇಕಾಯಿತೆನ್ನಿ. ಅದೋ ಅನಿವಾರ್ಯ, ಸೂಕ್ತ ಚಿಕಿತ್ಸೆ ಪಡೆದು ಮತ್ತೆ ಮಾಮೂಲು ಸ್ಥಿತಿಗೆ ಮರಳಿದರೆ ಮುಗಿಯಿತು. ಆದರೆ, 'ಅಯ್ಯೋ ನನ್ನ ಕೆಲಸದ ಕಥೆ ಏನು, ಎಷ್ಟು ದಿನ ಒಂದು ಕೈಲಿ ಮ್ಯಾನೇಜ್ ಮಾಡಬೇಕಾಗುತ್ತದೆಯೋ, ಜಗತ್ತಿನಲ್ಲಿ ಕೆಟ್ಟದ್ದಕ್ಕೆಲ್ಲ ನಾನೇ ಸಿಗುತ್ತೇನೆ' ಇಂಥವೆಲ್ಲ ಯೋಚನೆಗಳನ್ನು ಅತಿಯಾಗಿ ಮಾಡುವುದರಿಂದ ಮತ್ತಷ್ಟು ಸಂಕಷ್ಟ ಜಾಸ್ತಿಯಾಗುತ್ತದೆ. ಈ ಹೆಚ್ಚುವರಿ ಸಂಕಟವೇ ಎರಡನೇ ಬಾಣ. ಈ ಎರಡನೇ ಬಾಣ ನೆಟ್ಟರೆ ಅದು ಮೊದಲ ಬಾಣದ ನೋವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಒಂದಂತೂ ನೆನಪಿನಲ್ಲಿರಬೇಕು. ಮೊದಲನೆಯ ಬಾಣ ಅನಿವಾರ್ಯವಾದರೆ ಎರಡನೆಯ ಬಾಣ ಐಚ್ಛಿಕ ಅಷ್ಟೇ.

ಹೀಗಾಗಿ ಬುದ್ಧಿವಂತರು ಎರಡನೆಯ ಬಾಣವನ್ನು ತಪ್ಪಿಸಿಕೊಳ್ಳುತ್ತಾರೆ. ಸಂಕಟ ಅನಿವಾರ್ಯ, ನೋವು ತಾತ್ಕಾಲಿಕ ಅನ್ನುವುದನ್ನು ಅರ್ಥಮಾಡಿಕೊಂಡು ಕಡ್ಡಿಯನ್ನು ಗುಡ್ಡವಾಗಿಸಲು ಹೋಗುವುದಿಲ್ಲ. ತಮ್ಮನ್ನು ತಾವೇ ದೂಷಿಸಿಕೊಳ್ಳುವುದಿಲ್ಲ. ತಮ್ಮ ಸ್ಥಿತಿಗಾಗಿ ಬೇರೆಯವರನ್ನು ದೂರುವುದಿಲ್ಲ. ಆದರೆ ಮೂರ್ಖರು ಎರಡನೇ ಬಾಣವನ್ನು ಚುಚ್ಚಿಸಿಕೊಳ್ಳದೇ ಬಿಡುವುದಿಲ್ಲ.

ಹಾಗಾಗಿ ಬರುವ ಸಂಕಷ್ಟಗಳನ್ನು ಪ್ರಶಾಂತ ಮನಸ್ಸಿನಿಂದ ಸ್ವೀಕರಿಸಬೇಕು. ಸಮಸ್ಯೆ ಬಂದ ಮೇಲೆ ಅದನ್ನು ಹೇಗೆ ಪರಿಹರಿಸಿಕೊಳ್ಳಬೇಕು ಎನ್ನುವುದನ್ನು ಆಲೋಚಿಸಬೇಕು. ಉದಾಹರಣೆಗೆ ಹಣಕಾಸಿನ ಸಮಸ್ಯೆಯಾದರೆ, ಸಾಲ ಜಾಸ್ತಿಯಾದರೆ ನಮ್ಮ ಅನವಶ್ಯಕ ಖರ್ಚುಗಳನ್ನು ಕಡಿಮೆ ಮಾಡಿಕೊಂಡು ಮತ್ತಷ್ಟು ಕಷ್ಟಪಟ್ಟು ದುಡಿದು ನಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕು. ಲೋಕದ ಕಣ್ಣಿಗೆ ಮೆಚ್ಚಿಗೆಯಾಗುವಂತೆ ಬದುಕುವುದನ್ನು ಬಿಟ್ಟು ನಮ್ಮ ಆದಾಯಕ್ಕೆ ಅನುಗುಣವಾಗಿ ಬದುಕಬೇಕು. ಅದನ್ನು ಬಿಟ್ಟು ತನಗೇ ಕಷ್ಟ ಬಂದಿತೆಂದು ಮರುಗುತ್ತ ಕುಳಿತರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಕೆಲವರು ಕೆಟ್ಟ ನಿರ್ಧಾರಗಳನ್ನೂ ತೆಗೆದುಕೊಂಡು ಬಿಡುತ್ತಾರೆ. ಹಾಗಾಗಿ ಮೊದಲ ಬಾಣದ ಗಾಯವನ್ನು ಜಾಗರೂಕತೆಯಿಂದ ವಾಸಿ ಮಾಡಿಕೊಳ್ಳುವುದರಲ್ಲಿಯೇ ಜಾಣತನವಿದೆ.

• **ರೊ. ಎಂ. ಮಾಧವಾಚಾರ್**


ಸಭೆಯ ವರದಿ...




ಎಂದರು. ಹೆಣ್ಣಿನ ಸಾಮರ್ಥ್ಯವನ್ನು ತಪ್ಪು ಅಂದಾಜು ಮಾಡಬಾರದು. ಕೆಲಸಗಳನ್ನು ಸ್ಪರ್ಧಾತ್ಮಕವಾಗಿ ನಿರ್ವಹಿಸಿ, ಹೆಣ್ಣಿನ ಕುಲಕ್ಕೆ ಸಮಾಜಕ್ಕೆ ಶೋಭೆಯನ್ನು ತರಬಲ್ಲಳು. ಹೆಣ್ಣು ಮಕ್ಕಳಾದ ನಮಗೆ ಎಷ್ಟು ಶಕ್ತಿ ಇದೆ ಎಂದು ನಮಗೇ ಗೊತ್ತಿಲ್ಲ. ಆದುದರಿಂದಲೇ ಮಹಿಳಾ ದಿನಾಚರಣೆ ಆಚರಿಸಲಾಗುತ್ತಿದೆ. ಸಮಾಜದಲ್ಲಿ ವಿಕೃತಿ ತುಂಬಿದೆ. ಅನಾಚಾರ ಅಧಿಕವಾಗಿದೆ. ಆದರೆ ಯಾವ ಹೆಣ್ಣು ಮಕ್ಕಳೂ ಈ ಬಗ್ಗೆ ದೂರು ಕೊಡಲ್ಲ. ಹೆಣ್ಣಿನ ಗುಣಗಳಿಂದ ಕ್ರೌರ್ಯವನ್ನು ನಿಲ್ಲಿಸಬಹುದಾಗಿದೆ. ರಕ್ಷಣಾತ್ಮಕವಾಗಿ ಪೊರೆಯುವ ಜೀವನವನ್ನು ನಮ್ಮ ಮಕ್ಕಳಿಗೆ ಕಲಿಸಬೇಕಾಗಿದೆ. ಈ ಹಿಂದೆ ಹೆಣ್ಣಿನ ರಕ್ಷಣೆ ಮಾಡುವುದು ರಾಜನ ಕರ್ತವ್ಯವಾಗಿತ್ತು. ಈಗ ಮಾತನಾಡಿದುದು ಗಂಡು ಮಕ್ಕಳನ್ನು ದೂಷಣೆ ಮಾಡುವುದಕ್ಕಲ್ಲ. ಒಟ್ಟಾಗಿ ಯೋಚಿಸುವುದೇ ಆಗಿದ್ದು, ನಾವೆಲ್ಲರೂ ಹೃದಯ ವೈಶಾಲ್ಯತೆ, ಸಹನೆ ಇಟ್ಟುಕೊಳ್ಳೋಣ ಎಂದರು.

ಅಧ್ಯಕ್ಷರಾದ ರೊ. ಆರ್. ಆನಂದರವರು, ಮಾತನಾಡಿ ಸ್ತ್ರೀಯರಿಂದ ತಮಗಾಗುವ, ಆಗಿರುವ ಕೆಲವು ಅನುಭವಗಳನ್ನು ಹಾಗೂ ಅನುಕೂಲಗಳ ಅಂಶಗಳನ್ನು ಹಂಚಿಕೊಂಡರು. ಕರಾಗ್ರೆ ವಸತೆ ಲಕ್ಷ್ಮೀ ಎಂಬುದರ ಬಗ್ಗೆಯೂ ಮಾತನಾಡಿದರು. ಮುಖ್ಯ ಅತಿಥಿಗಳ ಭಾಷಣಕ್ಕೆ ಪೂರಕವಾದ ಕೆಲವು ಅಂಶಗಳನ್ನು ಉಲ್ಲೇಖಿಸಿ ಮುಖ್ಯ ಅತಿಥಿಗಳಿಗೆ ಕೃತಜ್ಞತೆಗಳನ್ನು ಸೂಚಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಕೊನೆಯಲ್ಲಿ ರೊ. ನಿರ್ಮಲಾ ಶಿವಾನಂದರವರು ವಂದನಾರ್ಪಣೆ ಮಾಡಿದರು. ⌘



**ಮುದ್ದುರಾಮನ ಚೌಪದಿ...**

ಬಿರಿವ ಗತಿಮತಿಯಿಂದ ಚೆಲುವಿನಾಗರ ಹೂವು
ಹರಿವ ಛಲದಿಂದ ತೊರೆಗೆ ಸಾಗರ ಮಿಲನ
ಸುರಿವ ಸಂತಸದಿಂದ ಮೇಘಮಾಲೆಗೆ ಸೊಬಗು
ಅರಿವಿಂದ ಸುಖಬದುಕು – ಮುದ್ದುರಾಮ

To,

Book Post

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495